# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 859 |
| ಸದಸ್ಯರ ಹೆಸರು | : | ಶ್ರೀ ಪಿ.ಆರ್.ರಮೇಶ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 11.03.2020. |
| ಉತ್ತರಿಸುವ ಸಚಿವರು | : | ಉಪಮುಖ್ಯಮಂತ್ರಿ<br>ಲೋಕೋಪಯೋಗಿ ಮತ್ತು<br>ಸಮಾಜ ಕಲ್ಯಾಣ ಇಲಾಖೆ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಹೆದ್ದಾರಿಗಳು ಎಷ್ಟು; (ಮಾಹಿತಿ ನೀಡುವುದು) | ಬೆಂಗಳೂರು ನಗರದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳು;<br>1) ರಾಹೆ-275: ಬಂಟ್ವಾಳ - ಬೆಂಗಳೂರು ಸೆಕ್ಷನ್,<br>2) ರಾಹೆ-948(209): ಬೆಂಗಳೂರು-ದಿಂಡಿಗಲ್ ಸೆಕ್ಷನ್,<br>3) ರಾಹೆ-48 (04): ಬೆಂಗಳೂರು-ಪುಣೆ ಸೆಕ್ಷನ್<br>4) ರಾಹೆ-75(04): ಬೆಂಗಳೂರು-ಕೋಲಾರ-ಮುಳಬಾಗಲು ಸೆಕ್ಷನ್<br>5) ರಾಹೆ-44 (7): ಬೆಂಗಳೂರು-ಹೈದರಾಬಾದ್ ಸೆಕ್ಷನ್<br>6) ರಾಹೆ-48 (7): ಬೆಂಗಳೂರು-ಹೊಸೂರು ಸೆಕ್ಷನ್.<br>ರಾ.ಹೆ. ವಲಯ ಲೋ.ಇ. ವ್ಯಾಪ್ತಿಯಲ್ಲಿ ರಾ.ಹೆ.275 - ಕಿ.ಮೀ.342.000 ರಿಂದ 348.377 ಬಂಟ್ವಾಳ - ಬೆಂಗಳೂರು ಸೆಕ್ಷನ್ ಮಾತ್ರ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುತ್ತದೆ. ಉಳಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಗಳು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುತ್ತವೆ.<br>ಬೆಂಗಳೂರು ನಗರದಲ್ಲಿ ಈ ಕೆಳಕಂಡ ರಾಜ್ಯ ಹೆದ್ದಾರಿಗಳು ಹಾದು ಹೋಗಿರುತ್ತವೆ. |

| ಕ್ರ ಸಂ | ವಿಧಾನಸಭಾ ಕ್ಷೇತ್ರ | ರಾಜ್ಯ ಹೆದ್ದಾರಿ ಹೆಸರು | ರಸ್ತೆಯ ಉದ್ದ ಕಿ.ಮೀಗಳಲ್ಲಿ |
|---|---|---|---|
| 1 | ಯಲಹಂಕ | ಹೆಸರುಘಟ್ಟ ಟ್ಯಾಂಕ್‌ಬಂಡ್ ರಸ್ತೆ-39 | 9.40 |
| 2 | ಬ್ಯಾಟರಾಯನಪುರ | ಬೆಂಗಳೂರು ನಂದಿ ರಸ್ತೆ (104) | 17.50 |
| 3 | ಯಲಹಂಕ | ಯಲಹಂಕ ಹಿಂದೂಪುರ ರಸ್ತೆ | 12.60 |
| 4 | ಯಶವಂತಪುರ | ಬೆಂಗಳೂರು-ಮಾಗಡಿ ರಸ್ತೆ (ರಾ.ಹೆ-85) | 20.00 |
| 5 | ಮಹದೇವಪುರ | ಹೊಸಕೋಟೆ-ಕಾಡುಗೋಡಿ-ಆನೇಕಲ್ ರಸ್ತೆ (ರಾ.ಹೆ-35) | 5.10 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಮಾಗಡಿ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಬೆಂಗಳೂರು–ಮಾಗಡಿ ರಸ್ತೆಯ ನೈಸ್ ಜಂಕ್ಷನ್ ರಸ್ತೆಯಿಂದ ಮಾಗಡಿವರೆಗೆ 35 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ಎ.ಡಿ.ಬಿ.–2 ನೆರವಿನ ಕೆಶಿಪ್–3 ಅಡಿಯಲ್ಲಿ ಕೈಗೊಳ್ಳಲಾಗಿದೆ. ಸದರಿ ರಸ್ತೆಯನ್ನು ಚತುಷ್ಪಥ ವಿಸ್ತೀರ್ಣಕ್ಕೆ ಅಭಿವೃದ್ಧಿಪಡಿಸಲಾಗುತ್ತದೆ. |
| ಇ) | ಬಂದಿದ್ದಲ್ಲಿ, ಸದರಿ ರಸ್ತೆಯು ಎಲ್ಲಿಂದ ಎಲ್ಲಿಗೆ ಸಂಪರ್ಕ ಕಲ್ಪಿಸುತ್ತದೆ ಎಂಬ ಮಾಹಿತಿ ನೀಡುವುದು; | ಸದರಿ ಕಾಮಗಾರಿ 2 ವರ್ಷಗಳ ನಿರ್ಮಾಣ ಹಾಗೂ 7 ವರ್ಷಗಳ ನಿರ್ವಹಣಾ ಅವಧಿಯನ್ನು ಹೊಂದಿದ್ದು, ಆನ್ಯೂಟಿ ಗುತ್ತಿಗೆ ಮಾದರಿಯಡಿ ಕೈಗೊಳ್ಳಲಾಗಿದೆ. ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಕ ಮಾಡಲಾಗಿದೆ.<br>ಗುತ್ತಿಗೆ ಕರಾರಿನಂತೆ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್) ಮತ್ತು ಗುತ್ತಿಗೆದಾರರಿಂದ ಪೂರ್ವಭಾವಿ ಸಿದ್ಧತೆಗಳು ಮತ್ತು ಷರತ್ತು ಪೂರೈಸಿದ ನಂತರ ನೇಮಕ ದಿನಾಂಕವನ್ನು ಘೋಷಿಸಲಾಗುವುದು. ಈ ಸಿದ್ಧತೆಗಳು ಅಂತಿಮ ಹಂತದಲ್ಲಿದ್ದು, ಸಧ್ಯದಲ್ಲಿಯೇ ಕಾಮಗಾರಿ ಪ್ರಾರಂಭಗೊಳ್ಳುವ ನಿರೀಕ್ಷೆಯಿದೆ. |
| ಈ) | ಮಾಗಡಿ ರಸ್ತೆಯನ್ನು ಮೇಲ್ದರ್ಜೆಗೇರಿಸುವಲ್ಲಿ ಅಗತ್ಯ ಭೂಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ; ಇದರ ಬಗ್ಗೆ ವಿವರ ನೀಡುವುದು? | ಬೆಂಗಳೂರು–ಮಾಗಡಿ ರಸ್ತೆಯ ನೈಸ್ ಜಂಕ್ಷನ್ ರಸ್ತೆಯಿಂದ ಮಾಗಡಿಯ ರಾಜ್ಯ ಹೆದ್ದಾರಿ–85 ರವರೆಗೆ ಹಾಗೂ ಮಾಗಡಿಯಿಂದ ರಾಷ್ಟ್ರೀಯ ಹೆದ್ದಾರಿ–75 ಕ್ಕೆ ಸೇರುವ ಜಾಗದವರೆಗೆ (ಚಿಕ್ಕಮುದಿಗೆರೆ ಹಾಗೂ ಐಯ್ಯಂಡಹಳ್ಳಿ ಜಿಲ್ಲಾ ಮುಖ್ಯರಸ್ತೆ ಮೂಲಕ) 50.80 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ರಸ್ತೆ ಅಭಿವೃದ್ಧಿಪಡಿಸಲು ಒಟ್ಟು 88–00 ಎಕರೆ ಭೂಮಿ ಅವಶ್ಯಕವಿರುತ್ತದೆ.<br>➢ ಸರ್ಕಾರಿ ಜಮೀನು 41–16½ ಎಕರೆ ಜಮೀನು ಕೆಶಿಪ್‌ಗೆ ವರ್ಗಾವಣೆ ಆಗಿರುತ್ತದೆ.<br>➢ ಖಾಸಗಿ ಜಮೀನು 46–23½ ಎಕರೆ ಅಗತ್ಯವಿದ್ದು, ಇದರಲ್ಲಿ 19–12¼ ಎಕರೆ ಜಮೀನು ಕ್ರಯ ನೋಂದಣಿಯಾಗಿರುತ್ತದೆ. 27–11¼ ಎಕರೆ ಜಮೀನು ಕ್ರಯ ನೋಂದಣಿಗೆ ಬಾಕಿ ಇರುತ್ತದೆ. |

ಕಡತ ಸಂಖ್ಯೆ: ಲೋಇ 68 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ